ಸಿಸಿ ಸಂಖ್ಯೆ **03/2021** ಡಿ .ಡಬ್ಲೂ್ಯ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **06.12.2025**

ಮುಂದುವರಿದ ಪಾಟೀ ಸವಾಲು ಃ ಶ್ರೀ **JKR** ನ್ಯಾಯಾವಾದಿಗಳಿಂದಃ

ನಾನು 3 ವರ್ಷಗಳಿಂದ ಶೀಘ್ರುಲಿಪಿಗಾರ್ತಿಯಾಗಿ ಕೆಲಸ ಮಾಡುತ್ತಿದ್ದೇನೆ. ಅದಕ್ಕಿಂತ ಮುಂಚೆ ನಾನು ಎಲ್ಲೂ ಕೆಲಸ ಮಾಡುತ್ತಿರಲಿಲ್ಲ. ದೊಡ್ಡವಸಗಾವಿಯ ಗ್ರಾಮದಲ್ಲಿ 8 ನೇ ತರಗತಿಯಿಂದ 10 ನೇ ತರಗತಿಯವರೆಗೆ ಪಿರ್ಯಾದಿಯ ಸಹೋದರ ಶ್ರೀನಿವಾಸರವರ ಜೊತೆ ನಾನು ಓದಿರುತ್ತೇನೆ.

2. ಚೀಟಿ ವ್ಯವಹಾರ ನಡೆಯುತ್ತಿದ್ದ ಸಂಬಂಧ ದಾಖಲೆಯನ್ನು ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಾನು ಪ್ರಯತ್ನಿಸುತ್ತೇನೆ. 2018 ರಿಂದ ಚೀಟಿ ವ್ಯವಹಾರ ನಡೆಯುತ್ತಿತ್ತು. ನನಗೆ ಹೇಳಿರುವ ಪ್ರಕಾರ ಚೀಟಿ ವ್ಯವಹಾರದಲ್ಲಿ 20 ಜನ ಸದಸ್ಯರು ಇದ್ದರು, ನನಗೆ ಖುದ್ದಾಗಿ ಗೊತ್ತಿರುವುದಿಲ್ಲ. ಚೀಟಿ ವ್ಯವಹಾರವು 1 ಲಕ್ಷ ರೂ. ದಾಗಿದ್ದು, ಪ್ರತಿ ತಿಂಗಳು 5 ಸಾವಿರ ಕಂತು ಇತ್ತು. ನಾನು 12 ತಿಂಗಳಿನ ಕಂತಿನಲ್ಲಿ ಚೀಟಿಯನ್ನು ತೆಗೆದುಕೊಂಡಿರುತ್ತೇನೆ. ಚೀಟಿ ತೆಗೆದುಕೊಂಡ ನಂತರ ಬಾಕಿ 4 ತಿಂಗಳಿನ ಕಂತನ್ನು ಕಟ್ಟಿರುತ್ತೇನೆ. 2019 ರಲ್ಲಿ ಚೀಟಿ ವ್ಯವಹಾರವು ಮುಗಿದಿರುತ್ತದೆ. 22 ಸಾವಿರ ಬಿಟ್ಟು ನಾನು ಚೀಟಿ ಹಣವನ್ನು ತೆಗೆದುಕೊಂಡಿರುತ್ತೇನೆ.

3. ಚೀಟಿ ಹಣವನ್ನು ಪಿರ್ಯಾದಿಯ ಸಹೋದರ ಶ್ರೀನಿವಾಸರವರು ತಂದು ಬೆಂಗಳೂರಿನ ಶ್ರೀನಗರದಲ್ಲಿರುವ ಬೃಂದಾವನ ನಗರಕ್ಕೆ ತಂದು ಕೊಟ್ಟರು. ಆ ಸಮಯದಲ್ಲಿನಮ್ಮಿಬ್ಬರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಚೀಟಿ ವ್ಯವಹಾರವನ್ನು ಸದರಿ ಶ್ರೀನಿವಾಸರವರೇ ಏಜೆಂಟ್ ಆಗಿ ನಡೆಸುತ್ತಿದ್ದರು. ನಾನು ಸುಮಾರು 15 ವರ್ಷಗಳಿಂದ ಪಿರ್ಯದಿಯಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ. ಪಿರ್ಯಾದಿರ್ಯಲ್ಲಿ ನಮೂದಿಸಿರುವ ವಿಳಾಸಕ್ಕೆ ಪಿರ್ಯಾದಿಯು

ನೋಟಿಸ್ ಅನ್ನು ನೀಡಿದ್ದರು ಸಹಾ ನಾನು ಅದನ್ನು ಸ್ವೀಕರಿಸದೇ ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ.

4. ಪಿರ್ಯಾದಿಯಸಹೋದರ ಶ್ರೀವಾಸರವರು ನಡೆಸುತ್ತಿದ್ದ ಚೀಟಿ ವ್ಯವಹಾರದಲ್ಲಿ ನಾನು ಸಹಾ ಸದಸ್ಯಳಾಗಿದ್ದೆ ಎಂಬುದರ ಸಂಬಂಧ ಸದರಿ ಚೀಟಿ ವ್ಯವಹಾರದ ಯಾರೋಬ್ಬ ಸದಸ್ಯರನ್ನು ಸಾಕ್ಷಿಯನ್ನಾಗಿ ಮಾಡಲು ನನಗೆ ಏನು ತೊಂದರೆ ಇಲ್ಲ.

5. ಸಾಮಾನ್ಯವಾಗಿ ಚೀಟಿ ವ್ಯವಹಾರದಲ್ಲಿ ಚೀಟಿ ವ್ಯವಹಾರ ನಡೆಯುತ್ತಿದ್ದಾಗ ಯಾರೋಬ್ಬಸದಸ್ಯ ಚೀಟಿಯನ್ನು ಎತ್ತಿದ್ದರೆ ಮತ್ತೊಬ್ಬ ಸದಸ್ಯ ಜಾಮೀನುದಾರ ಆಗಬೇಕು ಎಂದರೆ ಸರಿ. 2018 ರಲ್ಲಿ ಚೀಟಿ ವ್ಯವಹಾರವು ಪ್ರಾರಂಭಕೊಂಡಿದ್ದು 2019 ರ ಕೊನೆಯ ತಿಂಗಳಿನಲ್ಲಿ ಚೀಟಿ ವ್ಯವಹಾರವು ಮುಗಿದಿರುತ್ತದೆ. ಸದರಿ ಚೀಟಿ ವ್ಯವಹಾರವು ಒಟ್ಟು 16 ತಿಂಗಳ ವ್ಯವಹಾರದ್ದಾಗಿರುತ್ತದೆ. ನಾನು 16 ತಿಂಗಳು ಚೀಟಿ ಕಂತನ್ನು ಕಟ್ಟಿರುತ್ತೇನೆ.

6. ಚೀಟಿ ವ್ಯವಹಾರ ಮುಗಿದ ನಂತರ ನನ್ನ ಚೆಕ್ ಅನ್ನು ವಾಪಸ್ಸು ಕೊಡಿ ಎಂದು ನಾನು ಕೇಳಿರುತ್ತೇನೆ. ಪಿರ್ಯದಿಯಾ ಸಹೋದರರ ಚೀಟಿ ವ್ಯವಹಾರದ ಯಾವೊಬ್ಬ ಸದಸ್ಯನ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಯೇ ಅಥವಾ ಇಲ್ಲವೆ ಎಂದು ನನಗೆ ಗೊತ್ತಿಲ್ಲ.

7. ನಾನು ನ್ಯಾಯಾಲಯಕ್ಕೆ ಹಾಜರು ಆದ ಮೇಲೆ ದಾವೆಯನ್ನು ಸಲ್ಲಿಸುವ ಮುಂಚೆ ಪಿರ್ಯಾದಿಯು ಯಾವ ವಿಳಾಸಕ್ಕೆ ನನಗೆ ನೋಟಿಸ್ ಅನ್ನು ಕೊಟ್ಟಿರುತ್ತಾರೆ ಎಂದು ನಾನು ನಮ್ಮ ವಕೀಲರ ಮೂಖಾಂತರ ತಿಳಿದುಕೊಂಡಿರುತ್ತೇನೆ. ಅದರಂತೆ ಪಿರ್ಯಾದಿಯು ನಾನು ವಾಸ ಇದ್ದ ವಿಳಾಸಕ್ಕೆ ನೋಟಿಸ್ ಅನ್ನು ಕೊಟ್ಟಿದ್ದರು ಎಂದು ನನಗೆ ತಿಳಿದುಬಂದಿರುತ್ತದೆ.

8. ಪಿರ್ಯಾದಿಯ ಸಹೋದರ ನಡೆಸುತ್ತಿದ್ದ ಚೀಟಿಯು ಏಜೆಂಟ್ ವ್ಯವಹಾರವಾಗಿತ್ತು. ನಾನು 12 ನೇ ತಿಂಗಳಿನ ಚೀಟಿಯನ್ನು ಎತ್ತುವಾಗ ಚೀಟಿ ವ್ಯವಹಾರದಲ್ಲಿ ಖುದ್ದು ಭಾಗವಹಿಸಿರಲಿಲ್ಲ.

9. ಚೀಟಿ ವ್ಯವಹಾರದ ಎಲ್ಲಾ ಸದಸ್ಯರ ಹೆಸರು ನನಗೆ ಗೊತ್ತಿಲ್ಲ, ಇಬ್ಬರ ಹೆಸರು ಮಾತ್ರ ನನಗೆ ಗೊತ್ತಿರುತ್ತದೆ. ಚೀಟಿ ವ್ಯವಹಾರ ಮುಗಿದ ನಂತರ ಪಿರ್ಯಾದಿಯ ಸಹೋದರನ ಬಳಿ ಚೆಕ್ ಅನ್ನು ವಾಪಸ್ಸು ಕೊಡಿ ಎಂದು ಮೌಖಿಕವಾಗಿ ಕೇಳಿದ್ದನ್ನು ಹೊರತು ಪಡಿಸಿ ಲಿಖಿತ ದಾಖಲೆಗಳು ಇರುವುದಿಲ್ಲ.

10. ಪಿರ್ಯಾದಿಯ ಸಹೋದರ ನಾನು ಹೇಳಿದಂತೆ ಯಾವುದೇ ಚೀಟಿ ವ್ಯವಹಾರವನ್ನು ನಡೆಸುತ್ತಿರಲಿಲ್ಲ, ನನ್ನ ವೈಯಕ್ತಿಕ ಉದ್ದೇಶಕ್ಕಾಗಿ ನಾನು ಪಿರ್ಯಾದಿಯ ಬಳಿ 5 ಲಕ್ಷ ರೂ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

11. ನಿಪಿ.1 ಚೆಕ್ ನ ಖಾತೆಯನ್ನು ನಾನು ಈಗಲೂ ಬಳಸುತ್ತಿದ್ದೇನೆ. ಯಾವಾ ಕಾರಣಕ್ಕಾಗಿ ನಿಪಿ.1 ಚೆಕ್ ಅಮಾನ್ಯಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ1 ರ ಚೆಕ್ ಗೆ ಸಂಬಂಧಿಸಿದಂತೆ ನಾನು ಬ್ಯಾಂಕಿನಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ನನ್ನ ಚೆಕ್ ಅನ್ನು ಪಡೆದುಕೊಂಡು ಅದನ್ನು ನನಗೆ ವಾಪಸ್ಸು ಕೊಡದೇ ಸತಾಯಿಸುತಿರುತ್ತಾರೆ, ಅದನ್ನು ದುರುಪಯೋಗಪಡಿಸಿಕೊಂಡು ತಮ್ಮ ಬ್ಯಾಂಕಿಗೆ ಹಾಜರು ಪಡಿಸಬಹದು ಎಂದು ಖುದ್ದು ನಾನು ಬ್ಯಾಂಕಿನ ವ್ಯವಸ್ಥಾಪಕರ ಬಳಿ ದೂರು ಸಲ್ಲಿಸಿರುತ್ತೇನೆ. ಯಾವಾಗ ಸದರಿ ದೂರನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಅದರೆ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವುದಾಗಿ ನುಡಿಯುತ್ತಾರೆ. ಭದ್ರತೆಗಾಗಿ ನಾನು ಒಂದು ಚೆಕ್ ಅನ್ನು ಮಾತ್ರ ನೀಡಿರುತ್ತೇನೆ. ನಾನು ಬ್ಯಾಂಕಿನ ವ್ಯವಸ್ಥಾಪಕರ ಬಳಿ ದೂರನ್ನು ಸಲ್ಲಿಸುವಾಗ ನಿರ್ಧಿಷ್ಟ ವ್ಯಕ್ತಿಯ ವಿರುದ್ದ ದೂರು ಸಲ್ಲಿಸಿರುವುದಿಲ್ಲ.

12. ಯಾವ ಉದ್ದೇಶಕ್ಕಾಗಿ ನಿರ್ಧಿಷ್ಟ ವ್ಯಕ್ತಿಯ ವಿರುದ್ದ ಬ್ಯಾಂಕಿನಲ್ಲಿ ದೂರು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಪಿರ್ಯಾದಿಯ ಸಹೋದರ ಶ್ರೀನಿವಾಸರವರು ಕೇಂದ್ರ

ಸರ್ಕಾರದ ಹುದ್ದೇಯಲ್ಲಿ ಇದ್ದು, ತನ್ನ ಹೆಸರಿನಲ್ಲಿ ಚೆಕ್ ಅನ್ನು ಹಾಜರು ಪಡಿಸದೇ ಬೇರೆಯವರ ಮುಖಾಂತರ ಹಾಜರು ಪಡಿಸಬಹುದು ಎಂಬ ಕಾರಣಕ್ಕೆ ನಾನು ನಿರ್ಧಿಷ್ಟ ವ್ಯಕ್ತಿಯ ವಿರುದ್ಧ ದೂರನ್ನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

13. ಪಿರ್ಯಾದಿಯ ಸಹೋದರ ಶ್ರೀವಾಸರವರು ಸರ್ಕಾರಿ ನೌಕರನಾಗಿದ್ದರು ಸಹಾ ಚೀಟಿ ವ್ಯವಹಾರವನ್ನು ನಡೆಸುತ್ತಿದ್ದಾರೆ ಎಂದು ಮತ್ತು ನನ್ನ ಚೆಕ್ ಅನ್ನು ವಾಪಸ್ಸು ನೀಡದೇ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಸಂಬಂಧ ಪಟ್ಟ ಪ್ರಾಧಿಕಾರಗಳ ವಿರುದ್ಧ ಅವರ ವಿರುದ್ಧ ದೂರು ಸಲ್ಲಿಸಲು ನನಗೆ ಏನು ತೊಂದರೆ ಇರಲಿಲ್ಲ, ಚೆಕ್ ಅನ್ನು ಕೊಡುವುದಾಗಿ ಹೇಳುತ್ತಿದ್ದರಿಂದ ಕೊಡುತ್ತಾರೆ ಎಂದು ನಾನು ನಂಬಿದ್ದೆ ಆದರೆ ಈ ರೀತಿ ನನ್ನ ಚೆಕ್ ಅನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

14. ನಾನು ಪಿರ್ಯಾದಿಯಿಂದ ನೇರವಾಗಿ 5 ಲಕ್ಷ ರೂ ಸಾಲವನ್ನು ಪಡೆದುಕೊಂಡು ಸದರಿ ಸಾಲದ ತಿರುವಳಿಗಾಗಿ ನಿಪಿ.1 ಚೆಕ್ ಅನ್ನು ನೀಡಿದ್ದರು ಸಹಾ ಸಾಲವನ್ನು ವಾಪಸ್ಸು ಮಾಡುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು) ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ